ಆ) ಚಿಂಚೋಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ವಂತ ಕಟ್ಟಡ ಕಾಮಗಾರಿ ನಿರ್ಮಾಣಕ್ಕೆ ನಬಾರ್ಡ್ ಆರ್.ಐ.ಡಿ.ಎಫ್.–19 ರಡಿಯಲ್ಲಿ ₹ 160.22 ಲಕ್ಷಗಳ ಮಂಜೂರಾತಿ ದೊರೆತಿದ್ದು, ಈ ಕುರಿತು ಸರ್ಕಾರದ ಆಡಳಿತಾತ್ಮಕ ನೀಡಲು ಪರಿಶೀಲಿಸಲಾಗುತ್ತಿದ್ದು, ಕಟ್ಟಡ ನಿರ್ಮಾಣ ಮಾಡಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ನಾಡಕಛೇರಿ ಕಟ್ಟಡ ನಿರ್ಮಾಣ ಮಾಡುವುದು

921 (830); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಚಿಂಚೋಳಿ ತಾಲ್ಲೂಕಿನ ಕೋಡ್ಲಿ ಹೋಬಳಿಯಲ್ಲಿ ಕಂದಾಯ ಇಲಾಖೆಯ ನಾಡಕಛೇರಿ (ಉಪತಹಶೀಲ್ದಾರ) ಕಾರ್ಯಾಲಯ ಊರುಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಬಂದಿದೆ.

ಆ) ಪ್ರಸ್ತಾವನೆ ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾದ ಕೂಡಲೇ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಮುಳುಗಡೆ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸುವುದು

922 (831); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಜಲಾಶಯದಲ್ಲಿ ಮುಳಗಡೆಯಾದ ಗಡಿಲಿಂಗದಳ್ಳಿ, ಯಲ್ಮಾಡಿ, ಚನ್ನೂರು ಗ್ರಾಮಸ್ಥರಿಗೆ ಸಮರ್ಪಕ ಪುನರ್ ವಸತಿ ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು)?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಜಲಾಶಯದಲ್ಲಿ ಮುಳುಗಡೆಯಾದ ಗಡಿಲಿಂಗದಳ್ಳಿ, ಯಲಮಾಮಡಿ, ಚನ್ನೂರ ಗ್ರಾಮಸ್ಥರಿಗೆ ಅನುಮೋದಿತ ಲೇಔಟನಂತೆ ಪುನರ್ ವಸತಿ ಕಲ್ಪಿಸಲಾಗಿದ್ದು, ವಿವರಗಳು ಕೆಳಗಿನಂತಿವೆ.

ಗಡಿಲಿಂಗದಳ್ಳಿ:– ಕೇಂದ್ರ 1 ಮತ್ತು 2 :– ಸದರಿ ಕೇಂದ್ರದ ಪುನರ ವಸತಿ ಕಾಮಗಾರಿಗಳು 2000 ಪೂರ್ವದಲ್ಲಿ ಅನುಮೋದಿತ ಲೇಔಟ ನಂತೆ ಪೂರ್ಣಗೊಂಡಿದ್ದು ನಿರಾಶ್ರಿತರು 2000ಕ್ಕೂ ಮೊದಲು ಪುನರ್ ವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡಿರುತ್ತಾರೆ.

ಯಲಮಾಮಡಿ ಕೇಂದ್ರ:– 1ಮತ್ತು 2:– ಈ ಕೇಂದ್ರದ ಪುನರವಸತಿ ಕಾಮಗಾರಿಗಳು 93–94ರ ಪೂರ್ವದಲ್ಲಿ ಅನುಮೋದಿತ ಲೇಔಟನಂತೆ ಪೂರ್ಣಗೊಂಡಿದ್ದು ನಿರಾಶ್ರಿತರಿಗೆ ಹಕ್ಕು ಪತ್ರ ವಿತರಣೆ ಆಗಿದ್ದು ನಿರಾಶ್ರಿತರು 93–94ರಲ್ಲಿ ಪುನರ್ ವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡಿರುತ್ತಾರೆ.

ಗಡಿಲಿಂಗದಳ್ಳಿ:– ಕೇಂದ್ರ 3 :– ಈ ಪುನರ್ ವಸತಿ ಕೇಂದ್ರದಲ್ಲಿ ಅನುಮೋದಿತ ಲೇಔಟನಂತೆ ಕಾಮಗಾರಿಗಳು ಅಂದರೆ ರಸ್ತೆ, ನೀರು ಸರಬರಾಜು, ವಿದ್ಯುತ್ತೀಕರಣ, ಕೂಡುರಸ್ತೆ, ಸರಕಾರಿ ಕಟ್ಟಡಗಳು, ಮಂದಿರಗಳು ಪೂರ್ಣಗೊಂಡಿದ್ದು ನಿರಾಶ್ರಿತರು ಇನ್ನು ಸ್ಥಳಾಂತರಗೊಂಡಿರುವುದಿಲ್ಲ. ಪ್ರಸ್ತುತ ಹಕ್ಕು ಪತ್ರಗಳು ವಿತರಿಸುವ ಹಂತದಲ್ಲಿರುತ್ತವೆ.

ಚನ್ನೂರು:– ಈ ಪುನರ್ ಕೇಂದ್ರದಲ್ಲಿ ಅನುಮೋದಿತ ಲೇಔಟ ನಂತೆ ಕಾಮಗಾರಿಗಳು ಪೂರ್ಣಗೊಂಡಿದ್ದು ನಿರಾಶ್ರಿತರು 2000 ಪೂರ್ವದಲ್ಲಿ ಪುನರ್‌ವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡಿರುವರು.

ಅ) ಈ ಕುರಿತಂತೆ ಹಕ್ಕು ಪತ್ರ ನೀಡದೇ ಇರುವ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು 31–05–2015 ರೊಳಗೆ ವಿತರಿಸುವ ಕಾರ್ಯಪೂರ್ಣಗೊಳಿಸುವುದು, ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದರೂ ನಿರ್ವಹಣೆಗಾಗಿ ಜೆಸ್ಕಾಂದವರಿಗೆ ವಹಿಸಿಕೊಡುವುದು ಮುಂತಾದವುಗಳ ಬಗ್ಗೆ ಕ್ರಮ ವಹಿಸಲಾಗುತ್ತದೆ.

ಮೇಲಿನ ಎಲ್ಲಾ ಪುನರ್ ವಸತಿ ಕೇಂದ್ರದ ಕಾಮಗಾರಿಗಳು ಪೂರ್ಣಗೊಂಡು 15–20 ವರ್ಷ ಕಳೆದಿರುವುದರಿಂದ ಅಲ್ಲಲ್ಲಿ ರಸ್ತೆ, ಸಿ.ಡಿ ಕಾಮಗಾರಿಗಳು, ವಿದ್ಯುತ್ ಕಂಬಗಳ ಕಾಮಗಾರಿಗಳು ಹಾಳಾಗಿರುತ್ತದೆ. ಪ್ರಸ್ತುತ ಅವುಗಳನ್ನು ದುರಸ್ತಿಗೊಳಿಸಲು ಅನುದಾನವನ್ನು ನಿರ್ವಹಣಾ ಲೆಕ್ಕ ಶೀರ್ಷಿಕೆಯಡಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಲಾಗಿದೆ. ಅಲ್ಲದೆ ಈ ಪುನರ್ವಸತಿ ಕೇಂದ್ರಗಳಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲೂ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಮುಲ್ಲಾಮಾರಿ ನದಿಗೆ ಬ್ಯಾರೇಜ್ ನಿರ್ಮಾಣ ಮಾಡುವುದು

923 (833); ಶ್ರೀ ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಚಿಂಚೋಳಿ ತಾಲ್ಲೂಕಿನಲ್ಲಿ ಹರಿಯುವ ಮುಲ್ಲಾಮಾರಿ ನದಿಗೆ ಬ್ಯಾರೇಜು ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ? (ವಿವರ ನೀಡುವುದು)